# ಶ್ರೀಮಾತೆಯವರ ಮಧುರ ಸ್ಮೃತಿ

ಸ್ವಾಮಿ ವಾಸುದೇವಾನಂದ

ಅನುವಾದ: ಸ್ವಾಮಿ ಶಾಂತಿನಾಥಾನಂದ



೧೯೧೨ ನೆಯ ಇಸವಿಯ ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ನಾನು ಒಂದು ಸಲ ಬೇಲೂರು ಮಠಕ್ಕೆ ಹೋಗಿದ್ದೆ. ಅಲ್ಲಿ ಗಂಗಾರಾಮ್ ಮಹಾರಾಜರ ದರ್ಶನವಾಯಿತು. (ಇವರು ಬ್ರಹ್ಮಾನಂದರಿಂದ ಮಂತ್ರದೀಕ್ಷೆ ತೆಗೆದುಕೊಂಡವರು. ೧೯೦೪ ರಲ್ಲಿ ರಾಮಕೃಷ್ಣ ಮಹಾಸಂಘಕ್ಕೆ ಸೇರಿದರು. ತೀರ್ಥಯಾತ್ರೆ ಮತ್ತು ತಪಸ್ಸುಗಳಲ್ಲಿ ಅವರಿಗೆ ಪ್ರಬಲವಾದ ಆಸಕ್ತಿ. ೧೯೫೫ ಜೂನ್ ೬, ಬುಧವಾರದಂದು ಬಾಂಕುರಾ ಜಿಲ್ಲೆಯ ವಿಷ್ಣುಪುರದಲ್ಲಿ ಅವರ ದೇಹಾಂತ್ಯವಾಯಿತು.) ಅವರು ಹೇಳಿದರು, "ನಾನು ಉದ್ಬೋಧನಕ್ಕೆ ಹೋಗುತ್ತಿದ್ದೇನೆ. ನೀನೂ ಬಾ." ನಾನು ಏನೂ ಮಾತಾಡದೆ ಅವರ ಜೊತೆ ಹೊರಟೆ. 'ಬೂಢೇಬಾಬಾ' ಎಂದು ಕರೆಯುತ್ತಿದ್ದ ಒಬ್ಬರು ಸ್ವಾಮೀಜಿ ನನಗೆ ಹೇಳಿದರು, "ಗಂಗಾರಾಮ್‌ಗೆ ಒಳ್ಳೆಯ ಶಿಷ್ಯ ಸಿಕ್ಕಿದ್ದಾನೆ. ಮತ್ತೊಂದು ದಿನ ಬಂದು ಮಠದಲ್ಲಿ ಪ್ರಸಾದ ತೆಗೆದುಕೋ." (ಇವರ ಸಂನ್ಯಾಸದ ಹೆಸರು ಸ್ವಾಮಿ ಸಚ್ಚಿದಾನಂದ ಎಂದು. ಪೂರ್ವಾಶ್ರಮದ ಹೆಸರು ದೀನನಾಥ ಸೇನ್. ಸಂಘದಲ್ಲಿ 'ದೀನ್ ಮಹಾರಾಜ್' ಎಂದೇ ಪರಿಚಿತರಾಗಿದ್ದರು. ಸ್ವಾಮಿ ಶಾರದಾನಂದರಿಂದ ಸಂನ್ಯಾಸ ಪಡೆದಿದ್ದರು. ಅವರು ವಯಸ್ಸಿನಲ್ಲಿ ದೊಡ್ಡವರು. ಆದ್ದರಿಂದ ರಾಮಕೃಷ್ಣ ಸಂಘದಲ್ಲಿ 'ಬೂಢೇಬಾಬಾ' ಎಂದು ಕರೆಯಲಾಗುತ್ತಿತ್ತು. ೧೯೭೬ ರ ಜೂನ್ ೨೨ ರಂದು ತಮ್ಮ ೮೩ ನೆಯ ವಯಸ್ಸಿನಲ್ಲಿ ಇವರು ಶರೀರತ್ಯಾಗ ಮಾಡಿದರು.)

> ಸ್ವಾಮಿ ವಾಸುದೇವಾನಂದಜಿ ಅವರು ಶ್ರೀಮಾತೆಯವರ ಶಿಷ್ಯರು. ಅವರ ಸವಿನೆನಪುಗಳ ಕನ್ನಡ ಅನುವಾದ ಇದು. ರಾಮಕೃಷ್ಣ ಮಹಾಸಂಘದ ಹಿಂದಿ ಮಾಸಪತ್ರಿಕೆ 'ವಿವೇಕಜ್ಯೋತಿ'ಯಲ್ಲಿ ಪ್ರಕಟವಾದ ಇದರ ಕನ್ನಡ ಅನುವಾದವನ್ನು ಮಾಡಿರುವ ಸ್ವಾಮಿ ಶಾಂತಿನಾಥಾನಂದಜಿ ಅವರು ವಾರಾಣಸಿಯ ರಾಮಕೃಷ್ಣ ಅದ್ವೈತಾಶ್ರಮದಲ್ಲಿ ನಿವೃತ್ತಿ ಜೀವನವನ್ನು ನಡೆಸುತ್ತಿದ್ದಾರೆ. ಇವರ ಹಲವು ಘಟನಾ ನಿರೂಪಣೆಗಳು, ಅನುವಾದಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

"ಅಪ್ಪಣೆ" ಎಂದು ಹೇಳಿ ನಾನು ಗಂಗಾರಾಮ್ ಮಹಾರಾಜರ ಜೊತೆಗೆ ಹೊರಟೆ. ಉದ್ಬೋಧನಕ್ಕೆ ಬಂದೆ. ಅಲ್ಲಿ ಶ್ರೀಮಾತೆಯವರ ದರ್ಶನ ದೊರೆಯಿತು. ಇದೇ ನನ್ನ ಪ್ರಥಮದರ್ಶನ.

ನಾನು ನೋಡಿದೆ, ಶ್ರೀಮಾತೆಯವರು ಬಿಳಿಯ ಬಟ್ಟೆಯಿಂದ ತಮ್ಮ ಶರೀರವನ್ನು ಪೂರ್ತಿಯಾಗಿ ಮುಚ್ಚಿಕೊಂಡಿದ್ದರು. ನಾನು ಅವರಿಗೆ ಪ್ರಣಾಮ ಮಾಡಿದೆ. ಹೀಗೆ ಅವರ ಶ್ರೀಚರಣಗಳನ್ನು ಸ್ಪರ್ಶಿಸುತ್ತೇನೆ, ಅವರ ಪಾದಧೂಳಿಯನ್ನು ತೆಗೆದುಕೊಳ್ಳುತ್ತೇನೆ ಎಂದು ಕನಸಿನಲ್ಲೂ ನಾನು ಯೋಚಿಸಿರಲಿಲ್ಲ. ಶ್ರೀಮಾತೆಯವರು ಗಂಗಾರಾಮ್ ಮಹಾರಾಜರ ಕೈಲಿ ಪ್ರಸಾದ ಕಳಿಸಿದರು. ನಂತರ ಮನೆಗೆ ಹಿಂತಿರುಗಲು ನಾನು ರಸ್ತೆಗೆ ಇಳಿದು ಬಂದೆ. ಗಂಗಾರಾಮ್ ಮಹಾರಾಜ್ ಮತ್ತು ಕಪಿಲ್ ಮಹಾರಾಜ್ (ಸ್ವಾಮಿ ವಿಶ್ವೇಶ್ವರಾನಂದ) ಇಬ್ಬರೂ ನನ್ನ ಜೊತೆಯಲ್ಲೇ ಬಂದರು. ಇಬ್ಬರೂ ಹೇಳಿದರು, "ಇದು ನಿನ್ನ ಪರಮ ಸೌಭಾಗ್ಯ." "ಗಂಗಾರಾಮ್ ಮಹಾರಾಜ್ ಮಧ್ಯಾಹ್ನದ ಪ್ರಸಾದಕ್ಕೆ ಅಲ್ಲಿಯೇ ಉಳಿದುಕೊಂಡರು.

ಇದಾದ ನಂತರ, ಶ್ರೀಮಾತೆಯವರು ಉದ್ಬೋಧನದಲ್ಲಿ ಇರುವ ವಿಷಯ ತಿಳಿದರೆ, ನಾನು, ಪರೇಶ್ ಮತ್ತು ನರೇನ್ ಜೊತೆಗೂಡಿ ಅವರ ದರ್ಶನಕ್ಕೆ ಹೋಗುತ್ತಿದ್ದೆವು. ಬೇಲೂರು ಮಠ ಮತ್ತು ಬಲರಾಮ ಮಂದಿರಗಳಿಗೆ ಹೋಗಿ ಬರುತ್ತಿದ್ದರಿಂದ ನನಗೆ 'ಬೂಢೇಬಾಬಾ' ಅವರ ಜೊತೆ ಸಂಪರ್ಕ ಹೆಚ್ಚಾಯಿತು. ಅವರು ನನಗೆ ಸಂನ್ಯಾಸಿಯಾಗಲು ತುಂಬಾ ಪ್ರೋತ್ಸಾಹಿಸುತ್ತಿದ್ದರು.

ಮಠ ಸೇರುವುದಕ್ಕೆ ಮುಂಚೆ ಒಂದು ದಿನ ಕನಸು ಕಂಡೆ. ಮಠದಲ್ಲಿ ಉತ್ಸವವಾಗುತ್ತಿತ್ತು. ಒಬ್ಬ ವ್ಯಕ್ತಿ ಕೈಯಲ್ಲಿ ಸಿಂದೂರ ಲೇಪಿತವಾದ ಕೆಂಪುಬಣ್ಣದ ಚಿನ್ನದ ಧ್ವಜವನ್ನು ಹಿಡಿದುಕೊಂಡು ಬಂದು, "ತೆಗೆದುಕೋ, ಇದೇ ನಿನ್ನ ಇಷ್ಟಮಂತ್ರ" ಎಂದು ಹೇಳಿದರು. ಆ ಧ್ವಜದ ಮೇಲೆ ಒಂದು ಮಂತ್ರ ಬರೆದಿದ್ದುದನ್ನು ನಾನು ನೋಡಿದೆ. ಕೆಲವು ದಿನಗಳ ಕಾಲ ಆ ಮಂತ್ರವನ್ನು ಜಪಿಸುತ್ತಿದ್ದೆ. ಆದರೆ ಅದರಲ್ಲಿ ನಂಬಿಕೆ ಉಂಟಾಗಲಿಲ್ಲ. ಕೆಲವು ಕಾಲದ ನಂತರ ನಾನು ಮಠಕ್ಕೆ ಹೋಗಿ ಬಾಬುರಾಮ್ ಮಹಾರಾಜರಲ್ಲಿ (ಸ್ವಾಮಿ ಪ್ರೇಮಾನಂದ) ಮಂತ್ರದೀಕ್ಷೆಯ ಬಗ್ಗೆ ವಿಚಾರಿಸಿದೆ. ಅವರು ಕೃಷ್ಣಲಾಲ್ ಮಹಾರಾಜರ (ಸ್ವಾಮಿ ಧೀರಾನಂದ) ಜೊತೆ

ಮಾತಮಾಡಿ, ಉದ್ಬೋಧನದಲ್ಲಿದ್ದ ಶ್ರೀಮಾತೆಯವರ ಹತ್ತಿರ ಕಳಿಸಿದರು.

ದೀಕ್ಷೆಯ ಸಮಯದಲ್ಲಿ ನಾನು ಶ್ರೀಮಾತೆಯವರ ಎಡಗಡೆ ಕುಳಿತಿದ್ದೆ. ಅವರು ಆಳವಾದ ಧ್ಯಾನದಲ್ಲಿ ಮುಳುಗಿದ್ದರು. ಅನಂತರ ಅವರು ಹೇಳಿದರು, "ಠಾಕೂರರು (ಶ್ರೀರಾಮಕೃಷ್ಣರು) ನಿನಗೆ ಮೊದಲೇ ದೀಕ್ಷೆ ಕೊಟ್ಟಿದ್ದಾರೆ." ನಾನು ಹೇಳಿದೆ, "ನನಗೆ ಸ್ವಪ್ನದಲ್ಲಿ ವಿಶ್ವಾಸವಿಲ್ಲ. ನೀವೇ ಮತ್ತೊಂದು ಸಲ ಹೇಳಿಕೊಡಿ (ದೀಕ್ಷೆ ಕೊಡಿ)." ಅವರು ನಗುತ್ತಾ ಹೇಳಿದರು, "ಇದು ನಿನ್ನ ಮಂತ್ರ. ಈಗ ಜಪ ಮಾಡು." ಇಷ್ಟು ಹೇಳಿ ಅವರು ಮೊದಲೇ ಸ್ವಪ್ನದಲ್ಲಿ ಪ್ರಾಪ್ತವಾದ ಮಂತ್ರವನ್ನು ಉಚ್ಚರಿಸಿದರು. ಅವರ ನಿರ್ದೇಶನದಂತೆ ನಾನು ಜಪ ಮಾಡಲು ಪ್ರಾರಂಭಿಸಿದೆ. ಸ್ವಲ್ಪ ತಡೆದು ಹೇಳಿದರು, "ಗುರು ಮತ್ತು ಇಷ್ಟ ಒಂದೇ. ಅವರೇ ನಿನ್ನ ಇಷ್ಟ, ಅವರೇ ರಾಮಕೃಷ್ಣರಾಗಿದ್ದಾರೆ." ನಾನು ಸಾಷ್ಟಾಂಗ ಪ್ರಣಾಮ ಮಾಡಿ ಹೇಳಿದೆ, "ಅಮ್ಮ, ನನಗೆ ಭಕ್ತಿಯುಂಟಾಗಲಿ." ನನ್ನ ಭ್ರೂಮಧ್ಯದಲ್ಲಿ ಬೆರಳನ್ನು ಇಟ್ಟು ಅವರು ಹೇಳಿದರು, "ಠಾಕೂರರ ಕೃಪೆಯಿಂದ ನಿನ್ನ ಜ್ಞಾನಚಕ್ಷು ತೆರೆಯುವುದು. ಠಾಕೂರರು ನಿನ್ನ ಈ ಮೂರನೆಯ ಕಣ್ಣನ್ನು ತೆರೆಯುತ್ತಾರೆ. ಇದರಿಂದ ಅಜ್ಞಾನ ಅಂಧಕಾರ ದೂರ ವಾಗುವುದು. ನೋಡುತ್ತಿರು, ಎಷ್ಟು ಅನುಭವಗಳಾಗುತ್ತವೆ. ನೀನು ತುಂಬಾ ಧೈರ್ಯದಿಂದ ಇರಬೇಕು."

೧೯೧೫ ನೇ ಇಸವಿಯಲ್ಲಿ ಜಗದ್ಧಾತ್ರಿ ಪೂಜೆಯ ಸಮಯ ದಲ್ಲಿ ನಾವು ಬಾಂಕುರಾದಿಂದ ಜಯರಾಂಬಾಟಿಗೆ ಹೋದೆವು. ಆ ಸಮಯದಲ್ಲಿ ಬಾಂಕುರಾದಲ್ಲಿ ಬರ ಪರಿಹಾರ ಕಾರ್ಯ ನಡೆಯುತ್ತಿತ್ತು. ಅಲ್ಲಿಂದ ಭವಾನಿ, ವೀರೇನ್, ಸ್ವಾಮಿ ಶೈಲಾನಂದ, ಸ್ವಾಮಿ ಗಿರಿಜಾನಂದ, ವಿಭೂತಿ ಘೋಷ್, ನಾನು ಎಲ್ಲರೂ ಜೊತೆಗೂಡಿ ಹೋಗಿದ್ದೆವು.

೧೯೧೪ ನೇ ಇಸವಿಯಲ್ಲಿ ಆತ್ಮಾರಾಮನ ಕಲಶವನ್ನಿಟ್ಟು ಕೊಂಡೇ (ಶ್ರೀರಾಮಕೃಷ್ಣರ ಅಸ್ಥಿ) ಕಾಳೀ ಪೂಜೆ ಮತ್ತು ಜಗದ್ಧಾತ್ರಿ ಪೂಜೆಯನ್ನು ಮಾಡಲಾಗಿತ್ತು. ಈ ಸಲ (೧೯೧೫) ಜಗದ್ಧಾತ್ರಿ ಪೂಜೆಯ ಸಮಯದಲ್ಲಿ ಜಯರಾಂಬಾಟಿಯಲ್ಲಿದ್ದ ನಾನು, ಶ್ರೀಮಾತೆ ಯವರನ್ನು ಕೇಳಿದೆ, "ಆತ್ಮಾರಾಮನ ಕಲಶವನ್ನು ಇಟ್ಟುಕೊಂಡು ಕಾಳೀ ಪೂಜೆ ಮತ್ತು ಜಗದ್ಧಾತ್ರಿ ಪೂಜೆ ಮಾಡಬಹುದೇ? ಇದರಿಂದ ದೋಷವಾಗುವುದಿಲ್ಲವೇ?" ಶ್ರೀಮಾತೆ ಹೇಳಿದರು, "ದೋಷ ಏಕಾಗುತ್ತದೆ? ನೀನು ಎಂಥ ವೇದಾಂತ ಓದುತ್ತೀಯೆ? ಠಾಕೂರರೇ ಮಹೇಶ್ವರ ಮತ್ತು ಮಹೇಶ್ವರಿ –ಇಬ್ಬರೂ ಆಗಿದ್ದಾರೆ. ಅವರ ಶರೀರ ಶುದ್ಧ ಸತ್ವರೂಪದ ಯೋಗಮಾಯೆಯಿಂದ ಮಾಡಲ್ಪಟ್ಟಿದೆ. ಅವರು ಶಕ್ತಿಯೊಡಗೂಡಿದ ಬ್ರಹ್ಮನಲ್ಲದೆ ಬೇರಲ್ಲ. ಶಿವ ಮತ್ತು ಶಕ್ತಿ ಒಂದೇ. ಠಾಕೂರರು ವ್ಯಾಧಿಗ್ರಸ್ತರಾಗಿದ್ದ ಸಮಯದಲ್ಲಿ, ಒಂದು ದಿನ ನಾನು ಕಾಳೀಮಾತೆ ಕತ್ತು ಸೊಟ್ಟಗೆ ಮಾಡಿಕೊಂಡಿದ್ದನ್ನು ಕಂಡೆ. ಅವಳನ್ನು ಕೇಳಿದೆ, "ಅಮ್ಮ, ನೀನು ಏಕೆ ಕತ್ತು ಸೊಟ್ಟಗೆ ಮಾಡಿಕೊಂಡಿದ್ದೀಯೆ?" ಆಕೆ ಹೇಳಿದಳು, 'ಅವರ ಗಂಟಲಿನ ವ್ರಣದ ಕಾರಣದಿಂದ ನನ್ನ ಕತ್ತಿಗೂ ತುಂಬಾ ನೋವಾಗಿದೆ.' "

ಒಂದು ದಿನ ಜಯರಾಂಬಾಟಿಯಲ್ಲಿ ಲಲಿತ್ ಚಟ್ಟೋಪಾಧ್ಯಾಯನ ಬಗ್ಗೆ ಮಾತುಕತೆಯಾಗುತ್ತಿತ್ತು. ಅವನ ಮೇಲೆ ಶ್ರೀಮಾತೆಯವರ ಕೃಪೆ ತುಂಬಾ ಇದ್ದರೂ ಅವನಿಗೆ ಮದ್ಯ ಕುಡಿಯುವುದನ್ನು ಬಿಡಲಾಗುತ್ತಿಲ್ಲ. ಆದರೆ ಶ್ರೀಮಾತೆಯವರ ಮೇಲೆ ಅವನಿಗೆ ಅಗಾಧ ಭಕ್ತಿ ಇತ್ತು. ಈ ಮಾತುಕತೆಯನ್ನು ಕೇಳಿ ಶ್ರೀಮಾತೆಯವರು ಹೇಳಿದರು, "ರಾಟೆಯಲ್ಲಿ ಕೆಂಪು ನೀಲಿ ಬಣ್ಣಗಳ ದಾರ ಸುತ್ತುತ್ತಿರುವಾಗ, ಕೆಂಪು ಮತ್ತು ನೀಲಿಗಳ ಕ್ರಮದಲ್ಲೇ ಇರುತ್ತದೆ. ಅದನ್ನು ಬಿಚ್ಚುವಾಗಲೂ ಅದೇ ರೀತಿ ಕೆಂಪು ನೀಲಿ ಕ್ರಮವಾಗಿ ತೋರಿಬರುತ್ತವೆ. ಹೀಗಿದ್ದರೂ ಸುತ್ತುವುದರಲ್ಲಿ ಮತ್ತು ಬಿಚ್ಚುವದರಲ್ಲಿ ತುಂಬಾ ಅಂತರವಿದೆ. (ಹಾಗೆಯೇ ನಾವು ಮಾಡುವ ಕರ್ಮಗಳಲ್ಲೂ ಕೂಡ) ಒಂದರಲ್ಲಿ ಕರ್ಮಬಂಧನವು ಹೆಚ್ಚಾಗುತ್ತಾ ಹೋಗುತ್ತದೆ. ಎರಡನೆಯದರಲ್ಲಿ ಕರ್ಮಬಂಧನ ಕಡಮೆಯಾಗುತ್ತ ಹೋಗುತ್ತದೆ. ಆದರೆ ನೋಡುವುದಕ್ಕೆ ಎರಡೂ ಒಂದೇ ಅನ್ನುವ ತರಹ ಕಾಣುತ್ತದೆ."

ಉದ್ಬೋಧನದ ಪೂಜಾಮಂದಿರದಲ್ಲಿ ಅನೇಕ ದೇವಿ, ದೇವತೆಗಳಿದ್ದವು. ಮಾಕುವಿಗೆ ಸೇರಿದ ರಾಧಾಕೃಷ್ಣ, ಶ್ರೀಮಾತೆಯ ವರ ಗೋಪಾಲ, ಜಗದ್ಧಾತ್ರಿ, ಯೋಗೀನ್ ಮಾಳ ಎರಡು ಗೋಪಾಲನ ವಿಗ್ರಹಗಳು, ಬಾಣೇಶ್ವರ ಶಿವ, ಎರಡು ಗೋವರ್ಧನ ಶಿಲೆಗಳು, ಠಾಕೂರರ ಚಿತ್ರಪಟ, ಕಪಿಲ್ ಮಹಾರಾಜರಿಗೆ (ಸ್ವಾಮಿ ವಿಶ್ವೇಶ್ವರಾನಂದ) ಸೇರಿದ ಮಹಾಕಾಳಿ ಇತ್ಯಾದಿ. ಬಲರಾಮ್ ಮಂದಿರದಲ್ಲಿ ಬಾಬುರಾಮ್ ಮಹಾರಾಜರ ದೇಹತ್ಯಾಗ ವಾಗುವುದಕ್ಕೆ (೩೦ ಜುಲೈ ೧೯೧೮) ಕೆಲವು ದಿನಗಳ ಮೊದಲು ಕಪಿಲ್ ಮಹಾರಾಜ್ ಅಸ್ವಸ್ಥರಾದದ್ದರಿಂದ, ಪೂಜೆ ಮಾಡಲು ನನ್ನನ್ನು ಬೇಲೂರು ಮಠದಿಂದ ಉದ್ಬೋಧನಕ್ಕೆ ಕಳಿಸಿದರು. ಪೂರ್ವಾಶ್ರಮದಲ್ಲಿ ಹೇಗೆ ಬಾಣೇಶ್ವರ, ಸಾಲಿಗ್ರಾಮ, ಶಿವ, ಗೋಪಾಲ ಇವರುಗಳ ಪೂಜೆ ಮಾಡುತ್ತಿದ್ದೆನೋ ಹಾಗೆಯೇ ಇಲ್ಲಿಯೂ ಮಾಡುತ್ತಿದ್ದೆ.

ನಾನು ಹೋದಾಗ ಶ್ರೀಮಾತೆಯವರು ಅಲ್ಲಿ ಇರಲಿಲ್ಲ. ಅವರು ಜಯರಾಂಬಾಟಿಯಿಂದ ಹಿಂದಿರುಗಿದಾಗ ಕೇಳಿದೆ, "ಈ ಎಲ್ಲಾ ದೇವತೆಗಳ ಪೂಜೆ ಹೇಗೆ ಮಾಡಬೇಕು?" ಶ್ರೀಮಾತೆ ಕೇಳಿದರು, "ಇಲ್ಲಿಯವರೆಗೂ ಹೇಗೆ ಮಾಡುತ್ತಿದ್ದೆ?" ಪೂರ್ವಾಶ್ರಮದಲ್ಲಿ ನನ್ನ ಅಜ್ಜಿ ಯಾವ ಮಂತ್ರ ಹೇಳಿಕೊಟ್ಟಿದ್ದರೋ ಅದನ್ನು ಅವರಿಗೆ ಹೇಳಿದೆ. ಅವರು ಹೇಳಿದರು, "ನಿನ್ನ ಇಷ್ಟ ದೇವತೆಯ ಬೀಜಮಂತ್ರದಿಂದಲೇ ಎಲ್ಲಾ ದೇವದೇವತೆಗಳ ಪೂಜೆ ಮಾಡು. ಇಷ್ಟದೇವರೇ ಎಲ್ಲಾ ಆಗಿರುವುದು." ಇಷ್ಟು ಹೇಳಿದ ನಂತರ ಇಷ್ಟದೇವತೆಯ ಬೀಜಮಂತ್ರದ ಜೊತೆ ಒಂದೊಂದಾಗಿ ದೇವತೆಯ **ಹೆಸರು** ಮತ್ತು **ನಮಃ** ಸೇರಿಸಿ ಹೇಳಲು ಆರಂಭಿಸಿದರು. ಮತ್ತೆ ಹೇಳಿದರು, "ಎಂದಾದರೂ ಬೇರೆ ಯಾವುದೇ ದೇವರ, ದೇವಿಯ ಪೂಜೆ ಮಾಡಲು ಇಚ್ಛೆಯಾದರೆ, ಠಾಕೂರರ ಮೂರ್ತಿಯಲ್ಲೇ ಅವರನ್ನು ಆವಾಹಿಸಿ ಮಾಡಿದರಾಯಿತು. ಏಕೆಂದರೆ ಇಷ್ಟದೇವತೆ ಮತ್ತು ಆ ದೇವತೆಗಳು ಒಂದೇ ಆಗಿದ್ದಾರೆ. **ಶ್ರೀರಾಮಕೃಷ್ಣರು ಸರ್ವದೇವ ದೇವೀಸ್ವರೂಪರು.**"

(*ಮುಂದುವರಿಯುವುದು*)